# ತೇಜಸ್ವಿ ಮಾಯಲೋಕ ಕಾದಂಬರಿಯಲ್ಲಿನ ಮನುಷ್ಯ ಸಮಾಜ ಹಾಗೂ ಪರಿಸರದ ಅವಿನಾಭಾವ ಸಂಬಂಧಗಳು

**ಸುಜಾತ ಎ.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸೆಂಟ್ ಆನ್ಸ್ ಮಹಿಳಾ ಪದವಿ ಕಾಲೇಜು, ಬೆಂಗಳೂರು.

**DOI: https://doi.org/10.5281/zenodo.18787399**

## ABSTRACT:

ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ 'ಮಾಯಾಲೋಕ' ಕಾದಂಬರಿಯು ಗ್ರಾಮೀಣ ಭಾರತದ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕಲ್ಲೋಲಗಳನ್ನು ಪರಿಸರದ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತದೆ. ಗೊಂದಲಗೇರಿ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿನ ದೈನಂದಿನ ಬದುಕಿನ ಸಂಕೀರ್ಣತೆಗಳು, ಜಾತಿ, ವೃತ್ತಿ ಹಾಗೂ ಬದಲಾಗುತ್ತಿರುವ ಆರ್ಥಿಕ ವ್ಯವಸ್ಥೆಯ ಚಿತ್ರಣವನ್ನು ಇಲ್ಲಿ ಚರ್ಚಿಸಲಾಗಿದೆ. ಸತತ ಮೂರು ವರ್ಷಗಳ ಬರಗಾಲವು ಸೃಷ್ಟಿಸುವ ಆಡಳಿತಾತ್ಮಕ ಅರಾಜಕತೆ, ರೈತ ಚಳವಳಿ ಮತ್ತು ಇಲಾಖೆಗಳ ನಡುವಿನ ಸಂಘರ್ಷಗಳು ಮಾನವನ ಅಸಹಾಯಕತೆಯನ್ನು ತೋರುತ್ತವೆ. ಮನುಷ್ಯನ ಅಹಂಕಾರದ ಮೇಲಾಟಗಳು ಪ್ರಕೃತಿಯ ಅನಂತ ಶಕ್ತಿಯೆದುರು ಹೇಗೆ ಅರ್ಥಹೀನವಾಗುತ್ತವೆ ಎಂಬುದನ್ನು ಈ ಅಧ್ಯಯನವು ಪ್ರತಿಪಾದಿಸುತ್ತದೆ. ಮಹಾಮಳೆಯ ಆಗಮನದೊಂದಿಗೆ ಮಾನವ ನಿರ್ಮಿತ 'ಗೊಂದಲ'ಗಳು ಕೊಚ್ಚಿಹೋಗಿ, ಪರಿಸರವೇ ಅಂತಿಮ ನಿರ್ಧಾರಕ ಶಕ್ತಿ ಎಂಬ ಆಶಯವನ್ನು ಕಾದಂಬರಿಯ ಮೂಲಕ ಇಲ್ಲಿ ಗುರುತಿಸಲಾಗಿದೆ.

## KEYWORDS:

ಮಾಯಾಲೋಕ, ಗೊಂದಲಗೇರಿ, ಪರಿಸರ ಮತ್ತು ಸಮಾಜ, ಗ್ರಾಮೀಣ ಸಂಸ್ಕೃತಿ, ರಾಜಕೀಯ ಅರಾಜಕತೆ.

ಮಾಯಲೋಕ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ನಾಲ್ಕನೆ ಕಾದಂಬರಿ. ಗೊಂದಲಗೇರಿ ಎಂಬ ಸಣ್ಣ ಊರಿನಲ್ಲಿ ಮತ್ತು ಅದರ ಸುತ್ತಮುತ್ತಲ ಹಳ್ಳಿಗಳಲ್ಲಿ ನಡೆಯುವ ದೈನಂದಿನ ವಿದ್ಯಮಾನಗಳು ಅಲ್ಲಿನ ಸಮಾಜ, ಸಂಸ್ಕೃತಿ, ರಾಜಕಾರಣದ ಸೂಕ್ಷ್ಮ ವಿಷಯಗಳನ್ನು ನಮ್ಮ ಮುಂದಿಡುತ್ತದೆ. ಗೊಂದಲಗೇರಿ ಎಂಬ ಹೆಸರು ಅಲ್ಲಿರುವ ಅನೇಕ ಸಮಸ್ಯೆಗಳನ್ನು ಧ್ವನಿಸುತ್ತದೆ.

ಭಾರತದ ಹಳ್ಳಿಗಳು ನೋಡಲು ತಣ್ಣಗೆ ನಿದ್ರಿಸುವಂತೆ ಕಂಡರೂ ಒಳಹೊಕ್ಕು ನೋಡಿದರೆ ಭಯಂಕರ ಅಲ್ಲೋಲ ಕಲ್ಲೋಲದ ಹೆದ್ದರೆಗಳ ಮೇಲೆ ತೊಯ್ದಾಡುತ್ತಿರುವುದು ಕಾಣುತ್ತದೆ. ಇಂತಹ ಸೂಕ್ಷ್ಮ ವಿಚಾರಗಳನ್ನು ಮಾಯಾಲೋಕ ಕಾದಂಬರಿಯಲ್ಲಿ ತೇಜಸ್ವಿಯವರು ಚಿತ್ರಿಸುತ್ತಾರೆ. ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಮಾಯಲೋಕ ಕಾದಂಬರಿ ಗ್ರಾಮೀಣ ಸಮಾಜದ ಸೂಕ್ಷ್ಮ ವಿಚಾರಗಳನ್ನು ಸಮರ್ಪಕ

ರೀತಿಯಲ್ಲಿ ಕಟ್ಟಿಕೊಡುವ ಅತ್ಯುತ್ತಮ ಕಾದಂಬರಿ. ಹಿಂಡುಕೋಳಿಗಳ ಕಾಟದಿಂದ ಕೃಷಿಯಲ್ಲಿ ನಷ್ಟವಾಗಿ ಮೆಣಸಿನ ಗಿಡಗಳನ್ನು ಹಾಕಿ ವ್ಯವಸಾಯ ಮಾಡುವ ಅಣ್ಣಪ್ಪನ ಗೊಂದಲಗಳಿಂದಲೇ ಲೇಖಕರು ಅಲ್ಲಿನ ಸಮಾಜವನ್ನು ಕಟ್ಟಿಕೊಡಲು ಪ್ರಯತ್ನಿಸುತ್ತಾರೆ. ಇದರ ಜೊತೆಗೆ ತೇಜಸ್ವಿಯವರು ಇಲ್ಲಿ ನಿರೂಪಕರಾಗಿಲ್ಲ, ಕಾದಂಬರಿಯನ್ನು ನಡೆಸುವ ಪಾತ್ರವಾಗಿದ್ದಾರೆ.

ಗೊಂದಲಗೇರಿ, ಊರಳ್ಳಿ, ಮೆಕ್ಕಿಗೆದ್ದೆ ಇಲ್ಲಿ ನಡೆಯುವ ಪ್ರತಿಯೊಂದು ಸಮಸ್ಯೆಗಳು ಒಂದಕ್ಕೊಂದು ಬೆಸೆದುಕೊಂಡಿವೆ. ಲೇಖಕರ ಟೆಲಿಫೋನ್ ರಿಪೇರಿ ಸಮಸ್ಯೆಯು ತಿಪ್ಪಣ್ಣನ ವಿಚಾರಣೆಯಿಂದ, ಒ.ಎಫ್.ಸಿ. ಕೇಬಲ್ ಹಾಕಲು ಒಡ್ಡಬೋಯಿಗಳು ಗುಂಡಿ ತೆಗೆದಿದ್ದರಿಂದಲೂ, ಆ ಗುಂಡಿ ತೆಗೆಯುವಾಗ ತಿಮ್ಮಬೋವಿಗೆ ಒಂದು ಮಡಿಕೆಯು ಸಿಕ್ಕಿ ಅದರಲ್ಲಿ ಚಿನ್ನವಿತ್ತು ಎಂಬುದನ್ನು ಪೊಲೀಸರು ವಿಚಾರಣೆ ನಡೆಸುತ್ತಾರೆ. ಅದಕ್ಕೆ ತಿಮ್ಮಾಬೋವಿ ಹೇಳುವುದು–

‘‘ಪೊಲೀಸ್ನೋರಿಗೇನಾಗ್ಬೇಕು ಸೋಮೇ! ಚಿನ್ನಗಿನ್ನ ಸಿಕ್ಕಿದ್ರೆ ತಾವೊಂದಿಷ್ಟು ಬಾಚಿಕೊಳ್ಳಾನಾಂತ ಕತೆ ಕಟ್ತಾರೆ!’’[1] ಎಂದು ಸಮಜಾಯಿಷಿ ಕೊಡುತ್ತಾನೆ.

ಇನ್ನು ಅಲ್ಲಿ ಸಣ್ಣ ವ್ಯಾಪಾರಿಯಾಗಿರುವ ತರಕಾರಿ ಮಾರುವ ಜಲೀಲ್ ಸಾಬು ಊರೂರು ತರಕಾರಿ ಮಾರಿಕೊಂಡಿದ್ದವನು. ಗೊಂದಲಗೇರಿಗೆ ಹಲವಾರು ಆಫೀಸುಗಳು, ಸರಕಾರಿ ಸಂಬಳದ ನೌಕರ ವರ್ಗವು ಹೆಚ್ಚಾದ ಮೇಲೆ ತರಕಾರಿ ಅಂಗಡಿ ತೆರೆಯುತ್ತಾನೆ. ಇವನ ಮೆಣಸಿನಕಾಯಿ ಖಾರದಿಂದ ಬಜ್ಜಿ ಫಾತಿಮಾಗೂ ಇವನಿಗೂ ವಾಗ್ವಾದ ನಡೆಯುತ್ತದೆ. ಇನ್ನು ಬಜ್ಜಿ ಫಾತಿಮಾ ಬಜ್ಜಿ ಮಾರಿ ಜೀವನ ನಡೆಸುತ್ತಿರುವ ಮುಸ್ಲಿಂ ಮಹಿಳೆ. ಈಕೆ ಮುಸ್ಲಿಂ ಮಹಿಳೆಯಾದರೂ ಬುರ್ಖಾ ಹಾಕದಿರುವುದಕ್ಕೆ ಕಾರಣ ಗೊಂದಲಗೇರಿಯಲ್ಲಿ ಹೆಚ್ಚಾಗಿ ಹಿಂದೂಗಳಿದ್ದು ಇವಳ ವ್ಯಾಪಾರಕ್ಕೆ ಧಕ್ಕೆ ಬರಬಾರದೆಂದು.

ಇನ್ನು ಕುಂಟರಾಮನ ಭಿಕ್ಷಾಟನೆಯಲ್ಲೂ ಸಾಲ ಕೇಳಲು ಬರುವ ವ್ಯಕ್ತಿ. ಇನ್ನು ತರಕಾರಿ ಬೇಡವೆಂದು ಲೇಖಕರು ಮೀನು ತೆಗೆಯಲು ಹೋದರೆ ಅಬ್ದುಲ್ ಕಾಕ ಕೊಳಕು ಚರಂಡಿ ಪಕ್ಕ ಮೀನು ಮಾರುತ್ತಿದ್ದರಿಂದ ಅದನ್ನು ತಿಂದವರಿಗೆ ವಾಂತಿ–ಭೇದಿಗಳಾಗಿ, ಅದನ್ನು ಕೇಳಲು ಬಂದ ಪತ್ರಕರ್ತ ಪ್ರಕಾಶನಿಗೆ, ‘‘ಇದಕ್ಕೆಲ್ಲ ನಾನು ಕಾರಣವಲ್ಲ, ಮುನಿಸಿಪಾಲಿಟಿಯವರು’’ ಎಂದು ಹೇಳುವ ಅಬ್ದುಲ್ ಕಾಕ ಹೀಗೆ ಹೇಳುತ್ತಾರೆ:

‘‘ಇನ್ನು ಈ ಚರಂಡಿನ ನಾನು ಫಿನಾಲು ಹಾಕಿ ತೊಳೆಯೋದಕ್ಕೆ ಆಗುತ್ತಾ? ನೀವೇ ಯೋಚನೆ ಮಾಡಿ. ಅದ್ಕೆ ಒಂದು ಕೆಲಸ ಮಾಡಿ, ನಿಮ್ಮ ಪೇಪರಲ್ಲಿ ನಮ್ಮಂತೋರ ಮೇಲೆ ಬರೆಯೋದರ ಬದಲು ಮುನಿಸಿಪಾಲಿಟಿಯವರು ನಮಗೆ ಸರಿಯಾದ ಜಾಗ ಕೊಡೋದಕ್ಕೆ ಬರೀರಿ. ನಾಲ್ಕು ಜನಕ್ಕೆ ಉಪಕಾರನಾದ್ರು ಆಗುತ್ತೆ.’’ ಎಂದು ಕಾಕ ಪ್ರಕಾಶನಿಗೆ ಸಲಹೆ ಕೊಟ್ಟ.[2]

ಇನ್ನು ಕರಾಟೆ ಮಂಜಣ್ಣ ತನ್ನ ತಾಯಿಯ ಪೊಲೀಸ್ ಕೆಲಸದ ಆಸೆಯನ್ನು ನೆರವೇರಿಸದೆ ತನಗೆ ಇಷ್ಟ ಬಂದ ಹೊಟ್ಟೆ ಪಾಡಿನ ಕೆಲಸಗಳನ್ನು ಮಾಡಿ, ಯಶಸ್ವಿಯಾಗದ ತನ್ನ ಕರಾಟೆ ಕಲೆಯನ್ನು ಆ ಊರಿನ ಹುಡುಗಿಯರನ್ನು ರೇಗಿಸಲು ಬಂದ ಹುಡುಗರ ಮೇಲೆ ಪ್ರಯೋಗ ಮಾಡುತ್ತಾನೆ.

ಪ್ರಕೃತಿ ಮನುಷ್ಯ ಸಮಾಜದ ಮೇಲೆ ಬೀರುವ ಪ್ರಭಾವ ಹೇಗೆಲ್ಲ ಒಂದು ಸಮಾಜವನ್ನು ನಿಯಂತ್ರಿಸುತ್ತದೆ ಎಂಬುದನ್ನು ಈ ಕಾದಂಬರಿಯಲ್ಲಿ ತೇಜಸ್ವಿ ಕಟ್ಟಿಕೊಡುತ್ತಾರೆ. ನೀರಿನ ಪಂಪ್ ರಿಪೇರಿ ಮಾಡುವ ಇಕ್ಬಾಲ್ ಸಾಬಿ ಊರಳ್ಳಿಯವರು ಮೀನುಗಳು ಸಾಯಲು ಕಾರಣ ಎಂದು ಪುಕಾರು ಎಬ್ಬಿಸುತ್ತಾನೆ. ಇದರಿಂದ ಶುರುವಾಗುವ ಊರಳ್ಳಿ ಹಾಗೂ ಮೆಕ್ಕಿಗೆದ್ದೆಯ ಜಗಳ ಅನೇಕ ಸಮಸ್ಯೆಗಳ ಮೂಲವಾಗುತ್ತದೆ. ಮಳೆಯಿಲ್ಲದೆ ಅಣ್ಣಪ್ಪ ಹಾಗೂ ಬಾಬು ಸೇರಿ ಮಾಡಿದ ಮೆಣಸಿನ ಬೇಸಾಯ ಮಾಡಲು ನದಿ ನೀರನ್ನು ಮೆಣಸಿನ ತೋಟಕ್ಕೆ ತಿರುವಿದ್ದರಿಂದ ಪಂಪ್ ಸೆಟ್ ಕೆಟ್ಟಿದ್ದು ಎಂದು ಇಕ್ಬಾಲ್ ಸಾಬಿ ಪುಕಾರು ಎಬ್ಬಿಸಿ ಸಮಸ್ಯೆ ಶುರು ಮಾಡುತ್ತಾನೆ.

ಇನ್ನೊಂದು ಕಡೆ ಕರೆಂಟ್ ಡಿಪಾರ್ಟ್‌ಮೆಂಟ್ ನವರ ಕರೆಂಟ್ ತೆಗೆಯುವ ಅವ್ಯವಸ್ಥೆ ರೈತ ಸಂಘದವರ ಹೋರಾಟಕ್ಕೆ ಕಾರಣವಾಗುತ್ತದೆ. ಕರೆಂಟ್ ಡಿಪಾರ್ಟ್‌ಮೆಂಟ್ ಮಲ್ಲಿಕಾರ್ಜುನನ್ನು ರೈತ ಸಂಘದವರು ಹೊಡೆದರು ಎಂದು ಕರೆಂಟ್ ಡಿಪಾರ್ಟ್‌ಮೆಂಟ್ ಹೋರಾಟ ನಡೆಸುತ್ತಾರೆ. ಇವೆಲ್ಲ ಪ್ರಕಾಶನ ಪತ್ರಿಕೆಯ ಮುಖ್ಯ ವಿಷಯವಾಗುತ್ತದೆ. ಮೂರು ವರ್ಷಗಳಿಂದ ಮಳೆಯಿಲ್ಲದೆ ಕುಡಿಯುವ ನೀರಿಗೂ ತೊಂದರೆ ಅನುಭವಿಸುವ ಅಲ್ಲಿಯ ಜನ ಕೂಡ ಇಂತಹ ರೈತಸಂಘಕ್ಕೆ, ಅವರ ಹೋರಾಟಕ್ಕೆ ಬೆಂಬಲ ಕೊಡುತ್ತಾರೆ. ಎಂ.ಎಲ್.ಎ ಮಾರಪ್ಪ ತನ್ನ ಸ್ಥಾನ ಉಳಿಸಿಕೊಳ್ಳಲು ಹೆಣಗಾಡುತ್ತಾನೆ. ಕೊನೆಗೆ ಮಳೆ ಅಲ್ಲಿನ ಬಿಸಿ ಸಮಸ್ಯೆಯನ್ನು ತಣ್ಣಗಾಗಿಸುತ್ತದೆ.

**ಇಲ್ಲಿ ಟಿ.ಪಿ ಅಶೋಕರವರ ಮಾತು ಉಲ್ಲೇಖಾರ್ಹ:**

“ಮಾಯಲೋಕದ ಪರಿಕಲ್ಪನೆಯನ್ನು ಕಾದಂಬರಿಯಲ್ಲಿ ತೇಜಸ್ವಿಯವರು ಇನ್ನೂ ಒಂದು ನೆಲೆಯಲ್ಲಿ ಉನ್ನತೀಕರಿಸಿದ್ದಾರೆ. ಮೂರು ವರ್ಷಗಳಿಂದ ಮಳೆ ಬಾರದೆ ಗೊಂದಲಗೇರಿಯ ಎಲ್ಲ ಗೊಂದಲಗಳೂ ತಮ್ಮ ಪರಾಕಾಷ್ಠೆಯನ್ನು ಮುಟ್ಟಿ ಹಲವು ಬಗೆಯ ಸಂಕೀರ್ಣ ಚಟುವಟಿಕೆಗಳಿಗೆ ಮತ್ತು ವಿದ್ಯಮಾನಗಳಿಗೆ ಕಾರಣವಾಗುತ್ತದೆಯಷ್ಟೆ. ಹಲವು ದಿಕ್ಕುಗಳಲ್ಲಿ ಮತ್ತು ಹಲವು ನೆಲೆಗಳಲ್ಲಿ ಸಂಬಂಧವೇ ಇಲ್ಲವೆಂಬಂತೆ ನಡೆಯುತ್ತಿದ್ದ ಸಂಗತಿಗಳು ತಮಗರಿವಿಲ್ಲದಂತೆ ಒಟ್ಟಾಗಿ ಇಡೀ ಗೊಂದಲಗೇರಿಯೇ ಸ್ಫೋಟಿಸುವಂತ ವಾತಾವರಣ ನಿರ್ಮಾಣಗೊಂಡಾಗ ಹಿಂದೆಂದೂ ಕಾಣದಂತ ಮಳೆ ಪ್ರಾರಂಭವಾಗಿ ಎಲ್ಲ ಮನುಷ್ಯ ಚಟುವಟಿಕೆಗಳನ್ನು ಅಸಂಗತತೆಯ, ಅಸಂಬದ್ಧತೆಯ, ಅರ್ಥಹೀನತೆಯ ಅಂಚಿಗೆ ಸರಿದುಬಿಡುತ್ತದೆ.”[3]

ಹೀಗೆ ಗೊಂದಲಗೇರಿಯ ಸುತ್ತಲಿನ ಸಾಮಾಜಿಕ ಸಮಸ್ಯೆಗಳು ಪ್ರಕೃತಿಯ

ಅನಂತತೆಯಲ್ಲಿ ಹಾಗೂ ಸುರಿದ ಮಹಾ ಮಳೆಯಲ್ಲಿ ಕೊಚ್ಚಿ ಹೋಗುತ್ತವೆ. ಮಾಯಾಲೋಕ ಕಾದಂಬರಿಯಲ್ಲಿ ಹಿಂಡುಕೋಳಿ ಪ್ರಸಂಗವನ್ನು ವಿವರಿಸುತ್ತಲೇ ತೇಜಸ್ವಿಯವರು ವ್ಯವಸ್ಥೆಯನ್ನೇ ನಂಬಿ ಬದುಕುತ್ತಿರುವ ಅಲ್ಲಿನ ಕೆಳವರ್ಗ ಮತ್ತು ಅವರ ಸಂಸ್ಕೃತಿಯನ್ನು ಕಟ್ಟಿಕೊಡುತ್ತಾರೆ. ಹಿಂಡುಕೋಳಿಗಳನ್ನು ಹಿಡಿದು ತಿನ್ನುವ ಹಕ್ಕಿಪಿಕ್ಕರ ಸಂಸ್ಕೃತಿ ಬದಲಾಗುತ್ತಿರುವ ಆಧುನಿಕ ಸಂಸ್ಕೃತಿಗೆ ಒಳಪಟ್ಟು ವಿನಾಶವಾಗುತ್ತಿರುವ ಸೂಚನೆಯನ್ನು ತೇಜಸ್ವಿ ಹೇಳುತ್ತಾರೆ.

ಈ ಕಾದಂಬರಿಯಲ್ಲಿ ಬರುವ ಗೊಂದಲಗೇರಿಯ ಸಂಸ್ಕೃತಿ ನಿಜಕ್ಕೂ ಗೊಂದಲಗಳಿಂದ ಕೂಡಿದೆ. ಇಲ್ಲಿನ ಸಮಾಜದಲ್ಲಿ ಮೊದಲು ಸಂತೆಗಳಲ್ಲಿ ಸಿಗುತ್ತಿದ್ದ ತರಕಾರಿ ಈಗ ತರಕಾರಿ ಅಂಗಡಿಗಳಾಗಿ ಮಾರ್ಪಟ್ಟಿದೆ. ಇದಕ್ಕೆ ಕಾರಣ ಲೇಖಕರು ಜಲೀಲ್ ಸಾಬಿಯ ಬಗ್ಗೆ ಹೇಳುವಾಗ–

"ಅನೇಕ ವರ್ಷಗಳು ಕಳೆದ ಗೊಂದಲಗೇರಿಯಲ್ಲಿ ಹಲವಾರು ಆಫೀಸುಗಳು ಸರಕಾರಿ ಸಂಬಳದ ನೌಕರರ ವರ್ಗವೂ ಹೆಚ್ಚಾದ ಮೇಲೆ ಖಾಯಂ ಅಂಗಡಿ ತೆಗೆಯುವ ಯೋಚನೆ ಮಾಡಿದ"[4] ಎಂದು ವಿವರಿಸುತ್ತಾರೆ. ಬದಲಾದ ಸಂಸ್ಕೃತಿಯ ಪ್ರತೀಕಗಳಂತೆ ಕಾಣುವುದು ಇಕ್ಬಾಲ್ ಸಾಬಿ ಹಾಗೂ ಕರಾಟೆ ಮಂಜನ ಜೀವನ ಕ್ರಮ. ತಮ್ಮ ಮೂಲ ಸಂಸ್ಕೃತಿಯ ಕಸುಬುಗಳನ್ನು ಬಿಟ್ಟು ಬದಲಾದ ಸಂಸ್ಕೃತಿಗೆ ಒಗ್ಗಿಕೊಳ್ಳುವಲ್ಲಿ ನಡೆಸುವ ಪ್ರಯತ್ನವಿದು. ಉದಾಹರಣೆಗೆ ಕರಾಟೆ ಮಂಜಣ್ಣ ಯಾವ ಹೊಟ್ಟೆ ಪಾಡಿನ ಕೆಲಸವನ್ನು ಹೆಚ್ಚು ಕಾಲ ಮಾಡುತ್ತಿರಲಿಲ್ಲ. ಹಾಗೆಯೇ ಇಕ್ಬಾಲ್ ಸಾಬಿ ಮೆಕ್ಕಿಗದ್ದೆಯ ಕಮ್ಮಾರ, ತನ್ನ ಮೂಲ ಕಸುಬನ್ನಲ್ಲದೆ ಪಂಪ್‌ಸೆಟ್ ರಿಪೇರಿ, ಎತ್ತುಗಳಿಗೆ ಲಾಳ ಹೊಡೆಯುವ ಅನೇಕ ಉಪಕಸುಬುಗಳನ್ನು ಮಾಡುತ್ತಾನೆ. ಇಲ್ಲಿ ಪ್ರಧಾನ ಸಂಸ್ಕೃತಿಯಲ್ಲಿ ಉಪಕಸುಬುಗಳನ್ನು ಮಾಡುವುದನ್ನು ಕಾಣಬಹುದಾಗಿದೆ.

ಮಾಯಾಲೋಕ ಕಾದಂಬರಿಯಲ್ಲಿ ತೇಜಸ್ವಿಯವರು ಪರಿಸರ ಮನುಷ್ಯ ಸಮಾಜಕ್ಕೆ ಸಹಕರಿಸದೆ ಇದ್ದಾಗ ಮನುಷ್ಯ ಸಮಾಜದ ಗೊಂದಲಗೇರಿಯಲ್ಲಿ ಉಂಟಾಗುವ ಗೊಂದಲಗಳ ರಾಜಕೀಯ ಚಿತ್ರಣವನ್ನು ನಮಗೆ ಕಟ್ಟಿಕೊಡುತ್ತಾರೆ. ಗೊಂದಲಗೇರಿಗೆ ಮೂರು ವರ್ಷಗಳಿಂದ ಮಳೆ ಬಾರದೆ ಉಂಟಾಗುವ ಪರಿಸ್ಥಿತಿ ಪ್ರತಿಯೊಬ್ಬ ಪ್ರಜೆಯ ಮೇಲೂ ಪರಿಣಾಮ ಬೀರುತ್ತದೆ. ಮೊದಲಿಗೆ ಅಣ್ಣಪ್ಪಣ್ಣ ಮೆಣಸಿನಕಾಯಿ ಬೇಸಾಯ ಮಾಡಲು ಹೋಗಿ ಮೆಕ್ಕಿಗದ್ದೆಯ ಕಡೆಗೆ ಹರಿಯುವ ನೀರನ್ನು ತಮ್ಮ ತೋಟದ ಕಡೆಗೆ ತಿರುಗಿಸಿ ಮೆಕ್ಕಿಗದ್ದೆಯ ಪಂಚಾಯಿತಿ ಪಂಪ್‌ಸೆಟ್ ಕೆಟ್ಟುಹೋಗಿ, ಊರಳ್ಳಿಗೂ ಹಾಗೂ ಮೆಕ್ಕಿಗದ್ದೆಗೂ ಸಮಸ್ಯೆ ಶುರುವಾಗುತ್ತದೆ.

ಉಗ್ರಪ್ಪನ ಮುಂದಾಳತ್ವದಲ್ಲಿ ರೈತ ಸಂಘ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್ ವಿರುದ್ಧ ಹೋರಾಟಕ್ಕೆ ಇಳಿಯುತ್ತಾರೆ. ಏಕೆಂದರೆ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್ ಪದೇ ಪದೇ ಕರೆಂಟ್ ಕಟ್ ಮಾಡುವ ಮೂಲಕ ರೈತರ ಪಂಪ್ ಸೆಟ್‌ಗಳು ಹಾಳಾಗಿ ರೈತರ ಕೋಪಕ್ಕೆ ಕಾರಣರಾಗಿರುತ್ತಾರೆ. ರೈತರೆಲ್ಲ ಒಟ್ಟುಗೂಡಿ ಆ ಕ್ಷೇತ್ರದ ಎಂ.ಎಲ್.ಎ ಮಾರಪ್ಪನ ನೇತೃತ್ವದಲ್ಲಿ ಮಿನಿಸ್ಟರ್‌ಗೆ ದೂರು ಕೊಡಲು ನಿರ್ಧರಿಸುತ್ತಾರೆ. ಆದರೆ

ಮಿನಿಸ್ಟರ್ ಅಲ್ಲಿಗೆ ಬರದ ಕಾರಣ ಮಾರಪ್ಪನವರೇ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್ ಮಲ್ಲಿಕಾರ್ಜುನನ ಅಹಂಭಾವದಿಂದ ಸಮಸ್ಯೆ ಮುಂದುವರೆಯುತ್ತದೆ.

ಇಲ್ಲಿ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್‌ನವರು ತಮ್ಮ ಡಿಪಾರ್ಟ್‌ಮೆಂಟ್‌ನ ವಸ್ತುಗಳನ್ನು ಮಾರಿಕೊಳ್ಳುವುದು ಇಲ್ಲಿನ ಅರಾಜಕತೆಯನ್ನು ತಿಳಿಸುತ್ತದೆ. ಕೊನೆಗೆ ಇಲ್ಲಿನ ಪತ್ರಿಕೆ ಸಂಪಾದಕ ಪ್ರಕಾಶ, ರೈತ ಸಂಘದವರು ಮಲ್ಲಿಕಾರ್ಜುನನಿಗೆ ಕಪಾಳಮೋಕ್ಷ ಮಾಡಿದರೆಂದು ಸುಳ್ಳು ಸುದ್ದಿ ಪತ್ರಿಕೆಯಲ್ಲಿ ಪ್ರಕಟ ಮಾಡುತ್ತಾನೆ. ಇದನ್ನು ಪ್ರಶ್ನಿಸಲು ಬಂದ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್‌ನವರಿಗೆ ಪ್ರಕಾಶ ಸಮಾಜಾಯಿಷಿ ಕೊಡುವುದು ರಾಜಕೀಯ ಒಳನೋಟಗಳನ್ನು ತಿಳಿಸುತ್ತದೆ.

"ಪೇಪರಿನಲ್ಲಿ ಸುದ್ದಿ ಯಾರು ಕೊಟ್ಟರು ಅಂತ ಕೇಳುವ ಹಕ್ಕು ಯಾರಿಗೂ ಇಲ್ಲ, ಕೋರ್ಟಿಗೆ ಸಹ ಇಲ್ಲ ಗೊತ್ತಾಯ್ತು"[5] ಎಂದು ಪ್ರಕಾಶ ಅವರಿಗೆ ಪ್ರತ್ಯುತ್ತರ ನೀಡುತ್ತಾನೆ.

ಇಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪತ್ರಿಕೆಗಳು ತಮ್ಮದೇ ಸ್ವಾತಂತ್ರ್ಯದ ಗುರುತಾಗಿ ನಮಗೆ ಕಾಣಸಿಗುತ್ತದೆ. ನಂತರ ಈ ಗಲಾಟೆ ಮುಷ್ಕರಕ್ಕೆ ತಿರುಗಿ ಪರಸ್ಪರ ಸಂಬಂಧವೇ ಇಲ್ಲದ ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಈ ನಿಟ್ಟಿನಲ್ಲಿ ಜೋರು ಮಳೆ ಬಂದು ಅಲ್ಲಿನ ಭೂಮಿ ಮನುಷ್ಯನ ತಾಪಕ್ಕೆ ನೀರೆರೆಯುತ್ತದೆ. ನಂತರದಲ್ಲಿ ಯಾವುದೇ ಸಮಸ್ಯೆಯ ಕುರುಹುಗಳು ಇಲ್ಲದಂತೆ ಅಲ್ಲಿನ ವ್ಯವಹಾರಗಳು ಮುಂದುವರೆಯುತ್ತದೆ.

ಟಿ.ಪಿ. ಅಶೋಕ ಹೇಳುವಂತೆ, "ಹಲವು ದಿಕ್ಕುಗಳಲ್ಲಿ ಮತ್ತು ಹಲವು ನೆಲೆಗಳಲ್ಲಿ ಮೇಲು ನೋಟಕ್ಕೆ ಪರಸ್ಪರ ಸಂಬಂಧವೇ ಇಲ್ಲವೆಂಬಂತೆ ನಡೆಯುತ್ತಿದ್ದ ಸಂಗತಿಗಳು ತಮಗೆ ಅರಿವಿಲ್ಲದಂತೆ ಒಟ್ಟಾಗಿ ಇಡೀ ಗೊಂದಲಗೇರಿಯೇ ಸ್ಫೋಟಿಸುವಂಥ ವಾತಾವರಣ ನಿರ್ಮಾಣಗೊಂಡಾಗ ಹಿಂದೆಂದೂ ಕಾಣದಂತಹ ಮಳೆ ಪ್ರಾರಂಭವಾಗಿ ಎಲ್ಲ ಮನುಷ್ಯ ಚಟುವಟಿಕೆಗಳನ್ನು ಅಸಂಗತತೆಯ ಅಸಂಬದ್ಧತೆಯ ಅರ್ಥಹೀನತೆಯ ಅಂಚಿಗೆ ಸರಿಸಿ ಬಿಡುತ್ತದೆ."[6]

ಒಟ್ಟಾರೆ ಪ್ರಕೃತಿಗೆ ಮನುಷ್ಯನ ನಾಟಕೀಯ ವರ್ತನೆಯನ್ನು ನಿಯಂತ್ರಿಸುವ ಶಕ್ತಿ ಇದೆ ಎಂಬುದರ ಜೊತೆಗೆ, ಮಳೆ ಬಾರದ ಕಾರಣ ಇಲ್ಲಿ ನಡೆಯುವ ರಾಜಕೀಯ ನಾಟಕೀಯತೆಗಳು ಮಳೆಯ ರಭಸತೆಯಲ್ಲಿ ಕೊಚ್ಚಿ ಹೋಗುವುದನ್ನು ತೇಜಸ್ವಿ ಇಲ್ಲಿ ಧ್ವನಿಸುತ್ತಾರೆ.

## ಅಡಿ ಟಿಪ್ಪಣಿಗಳು:

1. ಪೂರ್ಣಚಂದ್ರ ತೇಜಸ್ವಿಕೆ.ಪಿ., (2006), ಮಾಯಾಲೋಕ, ಮೈಸೂರು: ಪುಸ್ತಕ ಪ್ರಕಾಶನ ಪು.ಸಂ. 33
2. ಅದೇ, ಪು.ಸಂ. 57
3. ಅಶೋಕ ಟಿ.ಪಿ., (2004), ತೇಜಸ್ವಿ ಕಥನ, ಹೆಗ್ಗೋಡು: ಅಕ್ಷರ ಪ್ರಕಾಶನ, ಪು.ಸಂ. 144
4. ಪೂರ್ಣಚಂದ್ರ ತೇಜಸ್ವಿಕೆ.ಪಿ., (2006), ಮಾಯಾಲೋಕ, ಮೈಸೂರು: ಪುಸ್ತಕ ಪ್ರಕಾಶನ ಪು.ಸಂ. 38–39
5. ಅದೇ, ಪು.ಸಂ. 257
6. ಅಶೋಕ ಟಿ.ಪಿ., (2004), ತೇಜಸ್ವಿ ಕಥನ, ಹೆಗ್ಗೋಡು: ಅಕ್ಷರ ಪ್ರಕಾಶನ, ಪು.ಸಂ. 144

## ಆಕರ ಗ್ರಂಥ:


1. ಪೂರ್ಣಚಂದ್ರ ತೇಜಸ್ವಿಕೆ.ಪಿ., (2006), ಮಾಯಾಲೋಕ, ಮೈಸೂರು: ಪುಸ್ತಕ ಪ್ರಕಾಶನ.


## ಪರಾಮರ್ಶನ ಗ್ರಂಥಗಳು:


1. ಅಶೋಕ ಟಿ.ಪಿ., (2004), ತೇಜಸ್ವಿ ಕಥನ, ಹೆಗ್ಗೋಡು: ಅಕ್ಷರ ಪ್ರಕಾಶನ.
2. ಅಶೋಕ ಟಿ.ಪಿ., (2013), ಕಥನ ಪ್ರೀತಿ, ಹೆಗ್ಗೋಡು: ಅಕ್ಷರ ಪ್ರಕಾಶನ.
3. ನಾಗಭೂಷಣ್ ಡಿ.ಎಸ್., (2010), ರಾಮಮನೋಹರ ಲೋಹಿಯಾ, ಶಿವಮೊಗ್ಗ: ಅಹರ್ನಿಶಿ ಪ್ರಕಾಶನ.
4. ರಹಮತ್ ತರೀಕೆರೆ, (1993), ಪ್ರತಿಸಂಸ್ಕೃತಿ, ಬಳ್ಳಾರಿ: ಲೋಹಿಯಾ ಪ್ರಕಾಶನ.
5. ವೀರಪ್ಪ ಜಿ.ಟಿ., (2004), ತೇಜಸ್ವಿ ಸಾಹಿತ್ಯ ಕೃಷಿ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
6. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (2012), ಹೊಸ ವಿಚಾರಗಳು, ಮೈಸೂರು: ಪುಸ್ತಕ ಪ್ರಕಾಶನ.
7. ಆಮೂರ ಜಿ.ಎಸ್., (2003), ಕನ್ನಡ ಕಥನ ಸಾಹಿತ್ಯ: ಸಣ್ಣಕಥೆಗಳು, ಬೆಂಗಳೂರು: ಪ್ರಿಯದರ್ಶಿನಿ ಪ್ರಕಾಶನ.